ಪತ್ತೆಯಾಯಿತು. ಮೂತ್ರಪಿಂಡ ತಜ್ಞರಲ್ಲಿ ಪರೀಕ್ಷೆ ಮಾಡಿಸಿದಾಗ ಕೇಶವ ಅವರ ಎರಡೂ ಕಿಡ್ನಿಗಳು ಕಾರ್ಯನಿರ್ವಹಿಸುವಲ್ಲಿ ಅಸಮರ್ಥವಾಗಿದ್ದವು. ಇದಕ್ಕೆ ಡಯಾಲಿಸಿಸ್ (ರಕ್ತ ಶುದ್ಧೀಕರಣ) ಒಂದೇ ದಾರಿ ಎಂದು ವೈದ್ಯರು ತೀರ್ಮಾನಕ್ಕೆ ಬಂದರು. ವಾರಕ್ಕೆ ಎರಡು ಬಾರಿ ಡಯಾಲಿಸಿಸ್ ಮಾಡಿಸಿಕೊಳ್ಳುತ್ತಿರುವ ಕೇಶವ ಅವರು ಸದ್ಯ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

***

ಈಚಿನ ದಿನಗಳಲ್ಲಿ ಮೂತ್ರಪಿಂಡ ಸಮಸ್ಯೆ ವಿಪರೀತ ಹೆಚ್ಚುತ್ತಿದೆ. ಅನಿಯಂತ್ರಿತ ಮಧುಮೇಹ, ಅಧಿಕ ರಕ್ತದೊತ್ತಡ, ಕೆಲವೊಮ್ಮೆ ಆನುವಂಶಿಕ ಕಾರಣಗಳಿಂದ ಕಿಡ್ನಿ ತೊಂದರೆ ಬರುತ್ತದೆ. ಹೀಗಾಗಿ ಮಧುಮೇಹ ಇದ್ದವರು ಕಿಡ್ನಿ, ಹೃದಯ, ಕಣ್ಣುಗಳನ್ನು ವರ್ಷಕ್ಕೊಮ್ಮೆ ಕಡ್ಡಾಯವಾಗಿ ಪರೀಕ್ಷಿಸಿಕೊಳ್ಳಬೇಕು. ಕಿಡ್ನಿ ಸಮಸ್ಯೆಯು, ಶೇ.35–40ರಷ್ಟು ಮಧುಮೇಹದಿಂದ, ಶೇ.20ರಷ್ಟು ಅತಿಯಾದ ರಕ್ತದೊತ್ತಡದಿಂದ ಬರುತ್ತದೆ. ಶೇ.30ರಷ್ಟು ಕಿಡ್ನಿಯಲ್ಲಿ ಪದೇ ಪದೇ ಕಲ್ಲುಗಳಾಗುವುದರಿಂದ ಬರುತ್ತದೆ ಎಂಬುದು ಮೂತ್ರಪಿಂಡ ತಜ್ಞರ ಅಭಿಪ್ರಾಯ.

ನೋವು ನಿವಾರಣೆಗೆಂದು ಅಧಿಕ ಔಷಧಿ ಸೇವನೆಯೂ ಕಿಡ್ನಿ ಸಮಸ್ಯೆ ಉಲ್ಬಣವಾಗಲು ಕಾರಣ. ಮೂತ್ರಪಿಂಡ ಸಮಸ್ಯೆ ಇರುವ 100 ಮಂದಿಯಲ್ಲಿ 50 ಮಂದಿಗೆ ಮಧುಮೇಹದಿಂದಲೇ ಕಿಡ್ನಿ ಸಮಸ್ಯೆ ಬಂದಿರುತ್ತದೆ. ಭಾರತದಲ್ಲಿ 10 ಲಕ್ಷಕ್ಕೆ 800 ಜನರಿಗೆ ಕಿಡ್ನಿ ತೊಂದರೆ ಇದೆ. ಇವರಲ್ಲಿ 150–200 ಮಂದಿ ತೀವ್ರವಾದ ಕಿಡ್ನಿ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಈಗೀಗ 18–20 ವರ್ಷದ ಯುವಕರಲ್ಲಿ ವಿಪರೀತ ತಲೆನೋವು, ಬಿಪಿ ಬರುತ್ತದೆ. ಇದು ಕಿಡ್ನಿ ತೊಂದರೆಯ ಮುನ್ಸೂಚನೆ ಎಂದು ತಿಳಿಯಬೇಕು.

## ಕಿಡ್ನಿ ವೈಫಲ್ಯಕ್ಕೆ ಕಾರಣಗಳೇನು?

ಮೂತ್ರಪಿಂಡ ಅಥವಾ ಕಿಡ್ನಿ ತನ್ನ ಕಾರ್ಯನಿರ್ವಹಣೆಯನ್ನು ಸಂಪೂರ್ಣವಾಗಿ ನಿಲ್ಲಿಸುವುದೇ ಮೂತ್ರಪಿಂಡ ವೈಫಲ್ಯ ಎನಿಸಿಕೊಳ್ಳುತ್ತದೆ. ಇದನ್ನು ವೈದ್ಯಕೀಯ ಪರಿಭಾಷೆಯಲ್ಲಿ ತೀವ್ರ ಮೂತ್ರಪಿಂಡ ಗಾಯ (Acute Kidney Injury) ಎಂದೂ ಕರೆಯಲಾಗುತ್ತದೆ. ಮೂತ್ರಪಿಂಡಗಳಿಗೆ ಹಾನಿ ಅಥವಾ ಗಾಯವಾಗಿ ಅದು ತನ್ನ ಸಾಮರ್ಥ್ಯವನ್ನು ಕಳೆದುಕೊಂಡಾಗ ದೇಹದಲ್ಲಿರುವ ಹಾನಿಕಾರಕ ಜೀವ ರಾಸಾಯನಿಕಗಳು ರೋಗಿಯ ದೇಹದಲ್ಲಿ ಸಂಗ್ರಹಗೊಳ್ಳುತ್ತದೆ. ಆಗ ಇಡೀ ದೇಹಕ್ಕೆ ಹಾನಿಯಾಗಿ ವ್ಯಕ್ತಿ ತೀವ್ರ ಅಸ್ವಸ್ಥತೆ ಎದುರಿಸಬೇಕಾಗುತ್ತದೆ.

'ಕಿಡ್ನಿ ವೈಫಲ್ಯಕ್ಕೆ ಅನೇಕ ಕಾರಣಗಳಿವೆ. ಮುಖ್ಯವಾಗಿ ಅನಿಯಂತ್ರಿತ ಮಧುಮೇಹ, ಅಧಿಕ ರಕ್ತದೊತ್ತಡ, ಹೃದಯಾಘಾತ, ಪಿತ್ತಜನಕಾಂಗ ವೈಫಲ್ಯ, ಗಂಭೀರ ಸ್ವರೂಪದ ಸೋಂಕು, ಅನೀಮಿಯಾ, ನಿರ್ಜಲೀಕರಣ,

## ಕೆಲವು ಟಿಪ್ಸ್

- ಆರೋಗ್ಯಕರ ಜೀವನಶೈಲಿ ಅಳವಡಿಸಿಕೊಳ್ಳುವುದು
- ರಕ್ತದೊತ್ತಡ, ಮಧುಮೇಹವನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವುದು
- ನಿತ್ಯ 45 ನಿಮಿಷ ಬಿರುಸಿನ ನಡಿಗೆ, ವ್ಯಾಯಾಮ ಮಾಡಬೇಕು
- ಸಾತ್ವಿಕ ಹಾಗೂ ಪೌಷ್ಟಿಕಾಂಶಯುಕ್ತ ಆಹಾರ ಸೇವನೆ
- ಶುದ್ಧ ನೀರನ್ನು ಕುಡಿಯಬೇಕು
- ವೈದ್ಯರ ಅನುಮತಿಯಿಲ್ಲದೆ ಯಾವುದೇ ಮಾತ್ರೆ ಸೇವಿಸಬಾರದು.



ಪುರುಷರಲ್ಲಿ ಪ್ರಾಸ್ಟೇಟ್ ಗ್ರಂಥಿಯ ಹಿಗ್ಗುವಿಕೆ, ಮೂತ್ರನಾಳದಲ್ಲಿ ಕಲ್ಲುಗಳು, ಮೂತ್ರನಾಳದಲ್ಲಿ ರಕ್ತ ಹೆಪ್ಪುಗಟ್ಟುವುದು, ಮಲ್ಟಿಪಲ್ ಮೈಲೋಮ (ಅಸ್ಥಿಮಜ್ಜೆಯಲ್ಲಿರುವ ಪ್ಲಾಸ್ಮಾಕೋಶಗಳ ಕ್ಯಾನ್ಸರ್) ಅಲ್ಲದೆ ಕ್ಯಾನ್ಸರ್‌ಗೆ ನೀಡುವ ಚಿಕಿತ್ಸೆ ಕೂಡ ಕೆಲವೊಮ್ಮೆ ಮೂತ್ರಪಿಂಡದ ಮೇಲೆ ಗಂಭೀರ ಪರಿಣಾಮ ಬೀರುವುದರಿಂದ ಕಿಡ್ನಿ ವೈಫಲ್ಯವಾಗಬಹುದು' ಎಂದು ಹೇಳುತ್ತಾರೆ ಶಿರಸಿಯಲ್ಲಿ ಮೂತ್ರಪಿಂಡ ತಜ್ಞ (ಯೂರಾಲಜಿಸ್ಟ್) ಆಗಿರುವ ಡಾ. ರೋಹಿತ್ ಹೆಗಡೆ.

ಮೂತ್ರಪಿಂಡ ವೈಫಲ್ಯದಲ್ಲಿ ಎರಡು ವಿಧ.

ಅಲ್ಪಾವಧಿ ಮೂತ್ರಪಿಂಡದ ಕಾಯಿಲೆ (Acute kidney disease)

ದೀರ್ಘಕಾಲದ ಮೂತ್ರಪಿಂಡ ಕಾಯಿಲೆ (Chronic kidney disease)

ಅಲ್ಪಾವಧಿ ಕಿಡ್ನಿ ಸಮಸ್ಯೆ ಆರಂಭವಾಗಿ ಕೆಲವೇ ದಿನಗಳಷ್ಟು ಸಮಯ ಮಾತ್ರ ಇರುತ್ತದೆ. ಆರಂಭದಲ್ಲೇ ಪತ್ತೆ ಹಚ್ಚಿ ಸೂಕ್ತ ಚಿಕಿತ್ಸೆ ನೀಡಿದರೆ ಗುಣವಾಗಲು ಸಾಧ್ಯ. ಕೆಲ ನಿರ್ದಿಷ್ಟ ದಿನಗಳಲ್ಲಿ ಮೂತ್ರಪಿಂಡ ನಮ್ಮ ರಕ್ತದಲ್ಲಿನ ತ್ಯಾಜ್ಯವನ್ನು ಹೊರಹಾಕುವಲ್ಲಿ ಅಸಮರ್ಥವಾಗಿರುತ್ತದೆ. ಇದಕ್ಕೆ ಪ್ರಮುಖ ಕಾರಣಗಳೆಂದರೆ ವಿಪರೀತ ನೋವು ನಿವಾರಕಗಳ ಸೇವನೆ, ಜ್ವರ, ಸಹಿಸಲಸಾಧ್ಯವಾದ ತಲೆನೋವು, ಗಂಭೀರ ಶಸ್ತ್ರಚಿಕಿತ್ಸೆಗೆ ಒಳಗಾಗಿರುವುದು, ಹೃದಯಾಘಾತ, ದೇಹದಿಂದ ರಕ್ತ ಮತ್ತು ನೀರಿನ ಅಪಾರ ನಷ್ಟವಾಗುವುದು, ಮಧುಮೇಹ ಮುಂತಾದವು. ಈ ಕಾರಣಗಳೂ ರೋಗಿಯಿಂದ ರೋಗಿಗೆ ವ್ಯತ್ಯಾಸವಾಗಬಹುದು.

ಅಲ್ಪಾವಧಿಯ ಮೂತ್ರಪಿಂಡ ವೈಫಲ್ಯದ ಲಕ್ಷಣಗಳೆಂದರೆ

- ವಿಪರೀತ ಸುಸ್ತು
- ಉಸಿರಾಟದ ತೊಂದರೆ
- ಶ್ವಾಸಕೋಶದಲ್ಲಿ ನೀರು ತುಂಬುವುದು
- ಪಾದ ಹಾಗೂ ಇತರ ಅಂಗಗಳಲ್ಲಿ ಊತ ಕಾಣಿಸಿಕೊಳ್ಳುವುದು
- ಮೂತ್ರ ವಿಸರ್ಜನೆ ಮಾಡುವಾಗ ಉರಿ ಹಾಗೂ ಕಡಿಮೆ ಮೂತ್ರ ವಿಸರ್ಜನೆ
- ರಕ್ತದಲ್ಲಿ ಪೊಟಾಷಿಯಮ್ ಅಂಶ ಹೆಚ್ಚಾಗುವುದು.

## ದೀರ್ಘಕಾಲದ ಮೂತ್ರಪಿಂಡ ವೈಫಲ್ಯ

ಮೂತ್ರಪಿಂಡದಲ್ಲಿ ಮುಖ್ಯವಾಗಿ ಇಜಿಎಫ್‌ಆರ್ (ಗ್ಲೋಮೆರುಲರ್ ಫಿಲ್ಟ್ರೇಶನ್ ರೇಟ್) ಮತ್ತು ಕ್ರಿಯಾಟಿನಿನ್ ದರವನ್ನು ಅಳೆಯುವ ಮೂಲಕ, ವೈದ್ಯರು ಮೂತ್ರಪಿಂಡದ ವೈಫಲ್ಯದ ಹಂತವನ್ನು ನಿರ್ಧರಿಸುತ್ತಾರೆ. ಈ ಸ್ಥಿತಿಯಲ್ಲಿ ವೈದ್ಯರು ರೋಗಿಯ ವಯಸ್ಸು ಮತ್ತು ದೇಹದ ಗಾತ್ರ, ಲಿಂಗ ಮತ್ತು ರಕ್ತದಲ್ಲಿ ಕ್ರಿಯಾಟಿನಿನ್ ದರದ ಅನುಗುಣವಾಗಿ ಇಜಿಎಫ್‌ಆರ್ ಲೆಕ್ಕ ಹಾಕುತ್ತಾರೆ. ಇದು ಮೂತ್ರಪಿಂಡ ವೈಫಲ್ಯದ ತಕ್ಷಣದ ಹಂತದ ಬಗ್ಗೆ ಇಜಿಎಫ್‌ಆರ್ ವೈದ್ಯರಿಗೆ ತಿಳಿಸುತ್ತದೆ, ಇದರ ಪ್ರಕಾರ ವೈದ್ಯರು ಚಿಕಿತ್ಸೆಗೆ ಕ್ರಮ ಕೈಗೊಳ್ಳುತ್ತಾರೆ.

ತೀವ್ರ ಮೂತ್ರಪಿಂಡ ವೈಫಲ್ಯಕ್ಕೆ ಪ್ರಮುಖ ಕಾರಣಗಳು

- ಅನಿಯಂತ್ರಿತ ಮಧುಮೇಹ ಮತ್ತು ಅಧಿಕ ರಕ್ತದೊತ್ತಡ
- ತೀವ್ರ ನಿರ್ಜಲೀಕರಣ
- ವಿಷ ಅಥವಾ ಕೆಲವು ಔಷಧಿಗಳಿಂದ ಮೂತ್ರಪಿಂಡದ ಜೀವಕೋಶಗಳಿಗಾಗುವ ಹಾನಿ
- ಅತಿಯಾದ ಆ್ಯಂಟಿಬಯೋಟಿಕ್ ಹಾಗೂ ಸ್ಟೀರಾಯ್ಡ್‌ಗಳ ಸೇವನೆ
- * ಮೂತ್ರನಾಳದ ಹಠಾತ್ ಅಡಚಣೆ

## ಕಿಡ್ನಿ ವೈಫಲ್ಯ; ನಿಮ್ಹಾನ್ಸ್ ಸಮೀಕ್ಷೆ

ಆಹಾರ ಕಲಬೆರಕೆ, ಕೊಳಚೆ ನೀರು ಬಳಸಿ ಬೆಳೆಯುತ್ತಿರುವ ತರಕಾರಿ, ಸೊಪ್ಪು, ಹಣ್ಣುಹಂಪಲು ವಿಷಯುಕ್ತವಾಗಿವೆ. ಇವುಗಳನ್ನು ನಾವು ಅರಿವಿಲ್ಲದೆ ಸೇವಿಸುತ್ತಿರುವುದರಿಂದ, ಇದು ಮೂತ್ರಪಿಂಡ ವೈಫಲ್ಯಕ್ಕೆ ಕಾರಣವಾಗುತ್ತಿದೆ. ಹುಟ್ಟುವ ಮಕ್ಕಳಲ್ಲಿ ಬುದ್ಧಿಮಾಂದ್ಯ ಸಮಸ್ಯೆಯೂ ಕಾಣಿಸಿಕೊಳ್ಳುತ್ತಿದೆ ಎಂಬ ಆತಂಕಕಾರಿ ಅಂಶ ಈಚೆಗೆ ಬೆಳಕಿಗೆ ಬಂದಿದೆ.

ನಿಮ್ಹಾನ್ಸ್‌ನ 50 ತಜ್ಞರು ಸೇರಿ 200 ಸಂಶೋಧಕರು ದೇಶದ 12 ರಾಜ್ಯಗಳಲ್ಲಿ ನಡೆಸಿರುವ ಮಾನಸಿಕ ಆರೋಗ್ಯ ಸಮೀಕ್ಷೆಯಲ್ಲಿ